# ಏಷ್ಯಾದ ಆನೆ




26,000 ರಿಂದ- 29,000 ರವರೆಗೆ ಆನೆಗಳು ಭಾರತದಲ್ಲಿದೆ

## IUCN ಸ್ಥಿತಿ

ಅಳಿವಿನಂಚಿನಲ್ಲಿದೆ


## ಆನೆಗಳ ಆವಾಸಸ್ಥಾನ

ಹುಲ್ಲುಗಾವಲು, ಕುರುಚಲು ಮತ್ತು ಪತನಶೀಲ ಕಾಡುಗಳು



## ಆಹಾರ ಪದ್ಧತಿ

ಹುಲ್ಲು, ಕೊಂಬೆ, ಗಿಡ, ತೊಗಟೆ, ಚಿಗುರು, ಕಾಂಡ ಮತ್ತು ಪೊದೆಗಳು. ಪ್ರತಿ ದಿನ **250-300** ಕಿ.ಗ್ರಾಂ ಆಹಾರ ಸೇವಿಸುತ್ತದೆ




## ಜೀವಿತಾವಧಿ

60 ವರ್ಷಗಳು


## ಸಂತಾನಾಭಿವೃದ್ಧಿಯ ವಯಸ್ಸು

14 ವರ್ಷಗಳು

## ಗರ್ಭಾವಸ್ಥೆಯ ಅವಧಿ


18 - 22 ತಿಂಗಳು

## ಎತ್ತರ




## ತೂಕ

ಮರಿ: ಹುಟ್ಟಿದ ಮರಿ 100 ಕಿ.ಗ್ರಾಂ ಇರುತ್ತದೆ
ಹೆಣ್ಣಾನೆ: 2,500–4,500 ಕಿ.ಗ್ರಾಂ
ಗಂಡಾನೆ : 3,000–6,000 ಕಿ.ಗ್ರಾಂ




## ನಿಮಗಿದು ಗೊತ್ತೇ?

- ಗಂಡಾನೆಗೆ ಮಾತ್ರ ದಂತಗಳಿರುತ್ತವೆ, ದಂತಗಳಿಲ್ಲದ ಗಂಡಾನೆಯನ್ನು ಮಖನ ಆನೆಗಳೆಂದು ಕರೆಯುತ್ತೇವೆ
- ಸೊಂಡಿಲುಗಳನ್ನು ಮೇಯಲು ಮತ್ತು ಹಿಡಿತಕ್ಕೆ ಬಳಸುತ್ತದೆ
- ಹಿಂಡನ್ನು ಹಿರಿಯ ಹೆಣ್ಣಾನೆ ನಿಯಂತ್ರಿಸುತ್ತದೆ, ಇವುಗಳನ್ನು ಮೆಟ್ರಿಯಾರ್ಕ್ (matriarch) ಎಂದು ಕರೆಯುತ್ತೇವೆ
- ಭಾರತದಲ್ಲಿ ಸಹಸ್ರಾರು ವರ್ಷಗಳಿಂದ ಆನೆಗಳನ್ನು ಹಿಡಿದು ಪಳಗಿಸುವುದು ರೂಢಿ ಯಲ್ಲಿದೆ
- ಬೆವರುಗ್ರಂಥಿ ಗಳಿಲ್ಲದಿರುವುದರಿಂದ ದೇಹವನ್ನು ತಂಪು ಮಾಡಲು ಮೈಮೇಲೆ ಕೆಸರನ್ನು ಎರಚಿಕೊಳ್ಳುತ್ತವೆ ಮತ್ತು ಕಿವಿಗಳನ್ನು ಬೀಸಣಿಗೆಯಂತೆ ಬಳಸಿಕೊಳ್ಳುತ್ತದೆ
- ಆನೆಗಳು ತಿಂದ ಆಹಾರದಲ್ಲಿ 40% ಮಾತ್ರ ಜೀರ್ಣಿಸುತ್ತದೆ, ಆದುದರಿಂದ ನಿರಂತರವಾಗಿ ತಿನ್ನುತ್ತಿರುತ್ತದೆ
- ನಿರ್ಜಲೀಕರಣವನ್ನು ತಪ್ಪಿಸುವುದಕ್ಕೆ ನೆರಳು ಅವಶ್ಯಕ
- **ಪ್ರತಿದಿನ 200 ಲೀಟರ್ ಕಲುಷಿತವಲ್ಲದ ಮತ್ತು ಕುಡಿಯುವ ನೀರು ಬೇಕಾಗುತ್ತದೆ**
- ಆನೆಗಳು ಅಣುಕಿಸುವ ಮತ್ತು ಉಪಕರಣಗಳನ್ನು ಬಳುಸುವಷ್ಟು ಜಾಣತನವನ್ನು ಪಡೆದಿದೆ

## ಪ್ರಮುಖ ಸಂಗತಿಗಳು

1. ಪ್ರತಿ ವರ್ಷ 100 ಆನೆಗಳು ಪ್ರತೀಕಾರಕ್ಕೆ ಮತ್ತು ದಂತಕ್ಕೋಸ್ಕರ ಕೊಲ್ಲಲ್ಪಡುತ್ತಿದೆ
2. ಎಲ್ಲಾ ಆನೆಗಳು ಬೆಳೆಗಳನ್ನು ಹಾಳುಮಾಡುವುದಿಲ್ಲ. ಮತ್ತು ಇದನ್ನು ಪರ್ಯಾಯ ಬೆಳೆಗಳನ್ನು ಬೆಳೆಯುವುದರಿಂದ ಹಾಗೂ ತಾತ್ಕಾಲಿಕ ಆನೆ ತಡೆ ಕಂದಕಗಳನ್ನು (ಬೆಳೆ ಕುಯ್ಲಿಗೆ ಬರುವಾಗ) ಮಾಡುವುದರಿಂದ ಸಂಘರ್ಷ ತಡೆಯಬಹುದಾಗಿದೆ
3. ಆನೆಗಳಿಂದಾಗುವ ಬಹುತೇಕ ದಾಳಿ ಹಠಾತ್ ಆಗಿ ಮನುಷ್ಯನು ತೀರ ಹತ್ತಿರಕ್ಕೆ ಆನೆಗಳನ್ನು ಸಮೀಪಿಸಿದಾಗ ನಡೆಯುತ್ತದೆ. ಮೊದಲೇ ಆನೆಯನ್ನು ಗುರುತಿಸಿ ಅಂತರ ಕಾಯ್ದುಕೊಳ್ಳುವುದರಿಂದ ಈ ಸಂಭವಗಳನ್ನು ತಪ್ಪಿಸಬಹುದು
4. ಅರಣ್ಯನಾಶ, ಕೃಷಿ ಭೂಮಿಯ ವಿಸ್ತರಣೆ ಮತ್ತು ಮಾನವನ ಅತಿಕ್ರಮಣ, ಆನೆ-ಮಾನವನ ಸಂಘರ್ಷಕ್ಕೆ ಮುಖ್ಯ ಕಾರಣ

## ವಲಸೆ

ವಲಸೆ ಬರುವ ದಾರಿಗಳನ್ನು ಅಥವಾ ಗಜಪಥಗಳನ್ನು "ಮೆಟ್ರಿಯಾರ್ಕ್" (**Matriarch**) ಗುಂಪಿನ ಹಿರಿಯ ಹೆಣ್ಣಾನೆ ಸರಿಯಾಗಿ ನೆನಪಿನಲ್ಲಿಟ್ಟುರತ್ತದೆ. ಆವಾಸ ಸ್ಥಾನಗಳ ವಿಘಟನೆ ಮತ್ತು ವಲಸೆ ಬರುವ ಹಾದಿಗಳ ಅಡಚಣೆಗಳಿಂದ ಹಾಗೂ ಮೆಟ್ರಿಯಾರ್ಕ್ ಅಥವಾ ವಯಸ್ಕ ಗಂಡಾನೆಯ ಸಾವು ಸಂಘರ್ಷಕ್ಕೆ ಕಾರಣವಾಗುತ್ತದೆ


**ಭಾರತದಲ್ಲಿ ಮಾನವ-ವನ್ಯಜೀವಿ ಸಂಘರ್ಷದ ತಗ್ಗಿಸುವಿಕೆಯ ಮೇಲೆ ಇಂಡೋ-ಜರ್ಮನ್ ಸಹಕಾರ**
**2017-2023**
**ಭಾರತದಲ್ಲಿ ಮಾನವ-ವನ್ಯಜೀವಿ ಸಂಘರ್ಷ ತಗ್ಗಿಸುವಿಕೆಗೆ ಸಾಮರಸ್ಯದ ಸಹ-ಅಸ್ತಿತ್ವದ ವಿಧಾನವನ್ನು ತೆಗೆದುಕೊಳ್ಳುವುದು**